ಅತ್ಯಾಚಾರಕ್ಕೆ ಧಿಕ್ಕಾರ
ಸುಧಾ ಕಾಳಜಿ



# ಶಿಕ್ಷೆಯ ಭಯವೇ ಮೌಲ್ಯದ ಬೇಲಿಯೇ?



**ಸೌಮ್ಯಾ ಲಕ್ಷ್ಮೀ ಭಟ್**
ನ್ಯಾಯವಾದಿ

**ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದಾಗೆಲ್ಲ ಅಪರಾಧಿಗಳಿಗೆ ಶಿಕ್ಷೆಯಾಗಬೇಕು; ಆ ಶಿಕ್ಷೆ ಉಳಿದವರಿಗೆ ಪಾಠವಾಗಬೇಕು ಎಂಬ ಕೂಗು ಕೇಳಿಬರುತ್ತದೆ. ಆದರೆ ಶಿಕ್ಷೆಯ ಭಯದಿಂದಲೇ ಒಂದು ಸ್ವಸ್ಥ ಸಮಾಜವನ್ನು ಕಟ್ಟಲು ಸಾಧ್ಯವೇ? ತನ್ನಂಥದೇ ಇನ್ನೊಬ್ಬ ಮನುಷ್ಯನನ್ನು ನೋಯಿಸುವ ಅಧಿಕಾರ ನನಗಿಲ್ಲ ಎಂಬ ಮಾನವೀಯ ಪ್ರಜ್ಞೆ ಮನಸ್ಸಲ್ಲಿ ಮೂಡದೇ ಹೋದರೆ ಕಾನೂನುಗಳು ತಾನೇ ಏನು ಮಾಡಲು ಸಾಧ್ಯ?**

ನ್ಯಾಯವೆಂದರೆ ಏನು ಎಂಬ ಪ್ರಶ್ನೆಯನ್ನು ಜನರ ಒಂದು ಗುಂಪಿನ ಮುಂದಿಟ್ಟರೆ ನಮಗೆ ವಿಭಿನ್ನ ಉತ್ತರಗಳು ಸಿಗುತ್ತವೆ. ಹಿಂಸೆಯನ್ನೋ ಅನ್ಯಾಯವನ್ನೋ ಅನುಭವಿಸಿದ ಒಬ್ಬನ ನ್ಯಾಯದ ಪರಿಕಲ್ಪನೆ ಒಂದಿದ್ದರೆ, ಅದೇ ಅನ್ಯಾಯ, ಹಿಂಸೆಯನ್ನು ಅನುಭವಿಸುವ ಮತ್ತೊಬ್ಬನ ನ್ಯಾಯದ ಪರಿಕಲ್ಪನೆ ಇನ್ನೊಂದಿರುತ್ತದೆ. ಆದರೆ ಎಲ್ಲ ರೀತಿಯ ಜನರೂ ಇರುವಂತಹ ಸಮಾಜಕ್ಕೆ ಒಂದು ಕಾನೂನು, ಒಂದು ದಂಡಸಂಹಿತೆ, ಏಕರೂಪದ ಹಾಗೂ ಸಮಾನವಾದ ಹಕ್ಕುಗಳನ್ನು ಕಾನೂನು ವ್ಯವಸ್ಥೆ ರೂಪಿಸುತ್ತದೆ. ಹಕ್ಕುಗಳ ಉಲ್ಲಂಘನೆಯಾದಾಗ ಅದಕ್ಕೆ ಯಾವ ರೀತಿಯ ಪರಿಹಾರವನ್ನು ಪಡೆಯಬಹುದು, ಹೇಗೆ ಪಡೆಯಬಹುದೆಂಬುದನ್ನು ಕೂಡ ಅದೇ ವ್ಯವಸ್ಥೆ ಹೇಳುತ್ತದೆ.

ನಮ್ಮ ದೇಶದಲ್ಲಿ ಸ್ತ್ರೀಯರ ಮೇಲೆ ನಡೆಯುವ ಕ್ರೌರ್ಯಗಳಲ್ಲಿ ಅತಿ ಹೆಚ್ಚು ಕಾಣಬರುವಂತಹದ್ದು ಕುಟುಂಬದ ಒಳಗೇ ನಡೆಯುವ ಕ್ರೌರ್ಯ. ಇದು ದೈಹಿಕ, ಮಾನಸಿಕ, ಭಾವನಾತ್ಮಕ, ಲೈಂಗಿಕ ಅಥವಾ ಹಣಕಾಸಿಗೆ ಸಂಬಂಧಿಸಿದ್ದಾಗಿರಬಹುದು. ಮನೆಯೊಳಗಿನ ನಮ್ಮ ಹೆಣ್ಣುಮಗಳಿಗೆ ದೈಹಿಕವಾಗಿ ಹಿಂಸಿಸಬಾರದು, ಮಾನಸಿಕವಾಗಿ ನೋಯಿಸಬಾರದು, ಭಾವನೆಗಳನ್ನು ಘಾಸಿಗೊಳಿಸಬಾರದು, ಲೈಂಗಿಕವಾಗಿ ಶೋಷಿಸಬಾರದು, ಅವಳ ದುಡಿಮೆಯ ಹಣವನ್ನು ದುರುಪಯೋಗಪಡಿಸಬಾರದು ಎಂದು ಕಾನೂನು ನಮಗೆ ಹೇಳುತ್ತದೆ; ಹೇಳಬೇಕಾಗಿ ಬಂದಿದೆ. ಇಂಥ ನಡವಳಿಕೆ ಅಪರಾಧವೆಂದು, ಇದಕ್ಕೆ ತನ್ನನ್ನು ಗುರಿಪಡಿಸಿದರೆ ತಾನು ಅದನ್ನು ವಿರೋಧಿಸಬಹುದು ಎಂಬುದು ಆಗಲೇ ಜನರಿಗೆ ತಿಳಿಯುವುದು. ಹೀಗೆ, ಕಾನೂನು ಜನರ ಆಲೋಚನೆ, ನಡವಳಿಕೆಗಳನ್ನು ರೂಪಿಸಬಲ್ಲುದು ಎಂದು ಅಂದುಕೊಂಡರೂ, ಕಾನೂನು ಜನರನ್ನು ಎಷ್ಟರಮಟ್ಟಿಗೆ ತಿದ್ದಬಲ್ಲುದು ಅನ್ನುವುದು ದೊಡ್ಡ ಪ್ರಶ್ನೆ. ವರದಕ್ಷಿಣೆ ವಿರೋಧಿ ಕಾನೂನು 1961ರಲ್ಲೇ ಬಂದರೂ ಈಗಲೂ ವರದಕ್ಷಿಣೆ ಕಿರುಕುಳ, ಸಾವುಗಳನ್ನು ನಮಗೆ ಎಷ್ಟು ತಡೆಯಲು ಸಾಧ್ಯವಾಗಿದೆ?

ಹೈದರಾಬಾದಿನಲ್ಲಿ ನಾಲ್ಕು ಜನ ಪುಂಡರು 26 ವರ್ಷ ವಯಸ್ಸಿನ ಪಶುವೈದ್ಯೆಯ ಮೇಲೆ ಅತ್ಯಾಚಾರವೆಸಗಿ ದೇಹವನ್ನು ಸುಟ್ಟುಹಾಕಿದರು. ರಾಂಚಿಯಲ್ಲಿ ಬುಡಕಟ್ಟು ಜನಾಂಗಕ್ಕೆ ಸೇರಿದ 25 ವರ್ಷ ವಯಸ್ಸಿನ ಕಾನೂನು ವಿದ್ಯಾರ್ಥಿನಿಯನ್ನು 12 ವ್ಯಕ್ತಿಗಳು ಬಂದೂಕು ತೋರಿಸಿ ಎಳೆದುಕೊಂಡುಹೋಗಿ ಬಲಾತ್ಕರಿಸಿದರು.